# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

ಪ್ರೊ. ಪ್ರಸಾದ ಬಿ. ರಾಂಪುರೆ ಎಂ.ಇ. ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ : 0831-2405468
ಫ್ಯಾಕ್ಸ್ ಸಂ : 0831-2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ಸ್ವಾ.ವಿ.ಜ/46/2025-26/1809 ದಿನಾಂಕ: 08 JAN 2026

**:ಸುತ್ತೋಲೆ:**

**ವಿಷಯ:** ಸ್ವಾಮಿ ವಿವೇಕಾನಂದರ 164ನೇ ಜನ್ಮ ದಿನಾಚರಣೆ ಆಚರಿಸುವ ಕುರಿತು.

ಉಲ್ಲೇಖ: ಸದಸ್ಯ ಕಾರ್ಯದರ್ಶಿ,ಎಐಸಿಟಿಇ ಹೊಸ ದೆಹಲಿ ಇವರ ಇಮೇಲ್ ದಿನಾಂಕ:29.12.2025

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷ ಜನವರಿ 12ರಂದು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ***ರಾಷ್ಟ್ರೀಯ ಯುವ ದಿನ*** ವನ್ನಾಗಿ ಆಚರಿಸಲಾಗುತ್ತಿದೆ. ಈ ವರ್ಷ ಸದರಿ ದಿನದಂದು ಯುವ ಪೀಳಿಗೆಯ ಸರ್ವಾಂಗೀಣ ಬೆಳವಣಿಗೆ ಉತ್ತೇಜಿಸುವ ಉದ್ದೇಶದಿಂದ ***ಸ್ವದೇಶಿಗಾಗಿ ಓಟ (ಸ್ವದೇಶಿ ಸಂಕಲ್ಪ ಓಟ)*** ಎಂಬ ಕಾರ್ಯಕ್ರಮವನ್ನು ಮಹಾವಿದ್ಯಾಲಯಗಳಲ್ಲಿ ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಮುಂದುವರೆದು, 2ಕಿ.ಮೀ/3ಕಿ.ಮೀ/5ಕಿ.ಮೀ ಓಟ ಹಾಗೂ ಪ್ರೇರಣಾದಾಯಕ ಭಾಷಣ, ಸ್ವದೇಶಿ ಮಹತ್ವ, ಆತ್ಮನಿರ್ಭರ ಭಾರತ ಕುರಿತು ವಿದ್ಯಾರ್ಥಿಗಳಿಗೆ, ಎನ್.ಎಸ್.ಎಸ್/ಎನ್.ಸಿ.ಸಿ ಸ್ವಯಂ ಸೇವಕರು, ಯುಥ್‌ಕ್ಲಬ್, ಪ್ರಾಧ್ಯಾಪಕರು ಮತ್ತು ಸಾರ್ವಜನಿಕರಿಗೆ ಕಾರ್ಯಕ್ರಮಗಳನ್ನು ಆಯೋಜಿಸಿ ಛಾಯಾಚಿತ್ರ/ವೀಡಿಯೊಗಳೊಂದಿಗೆ ವರದಿಯನ್ನು ಗೂಗಲ್ ನಮೂನೆಯಲ್ಲಿ https://forms.gle/FueK3KVWU94jaQ4JA ಮತ್ತು ವಿತಾವಿ ರಾ.ಸೇ.ಯೋ. ಕೋಶದ ಇಮೇಲ್ ಐಡಿ nss@vtu.ac.in ಗೆ ಸಲ್ಲಿಸಲು ಹಾಗೂ ಮಹಾವಿದ್ಯಾಲಯದ ಎಲ್ಲ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸುವಂತೆ ಸೂಚಿಸಲಾಗಿದೆ.

Ram/08/01/26
ಕುಲಸಚಿವರು

*ಇವರಿಗೆ,*

ಪ್ರಾಂಶುಪಾಲರು,
ವಿ.ತಾ.ವಿ. ಅಧೀನಕ್ಕೊಳಪಡುವ ಸಂಬಂದಪಟ್ಟ
ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

*ಪ್ರತಿಯನ್ನು ಮಾಹಿತಿಗಾಗಿ:*

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ಪ್ರಾದೇಶಿಕ ನಿರ್ದೇಶಕರು, ಬೆಳಗಾವಿ, ಕಲಬುರಗಿ, ಬೆಂಗಳೂರು ಮತ್ತು ಮೈಸೂರು ಪ್ರಾದೇಶಿಕ ಕೇಂದ್ರಗಳು.
4. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ಕಚೇರಿ ಪ್ರತಿ.